
ಸುಲಿಬೇಕಾರೆ ಅವರಪ್ಪಂಗೆ ಕಾಣದಂಗೆ ಡಬ್ಬ ಡಬ್ಬ ಸುಲಿದ ಅಡಕೆ ಹೆಂಗೆ ಕೊಟ್ಟುದಾನೆ ಗೊತ್ತೇನ್ರೋ, ಏನೂ ಇಲ್ಲ ಅಂದ್ರೆ ಇದ್ಯಾಕಪ್ಪ' ಅಂತಿದ್ದಂಗೆ ಶೇಕ್ರಿ ' ಇಲ್ಲಿ ಕೇಳ್ರಲೇ ಆಕೆ ಬಡವಿ, ಅವರಪ್ಪ ಪಾಪ ಕಾಯಿಲೆ ಮನುಷಾ, ಏನೋ ಒಂಚೂರು ಹೆಲ್ಪ್ ಅಂತ ಕೊಟ್ಟರೆ ಅದನ್ನೇ ಅಪಾರ್ಥ ಮಾಡಿಕಳ್ತಿರಲ್ಲಲೇ' ಅದಕ್ಕೆ ಸಿದ್ದೇಶಿಯು 'ಹೌದು ಊರಗೆ ಆಕೆ ಒಬ್ಬಳೇ ಬಡವಿ, ಬ್ಯಾರೆ ಹೆಣ್ಮಕ್ಕಳಿಲ್ಲವೇ ಬಡವರು ಇವರಿಗಿಲ್ಲದ್ದ ಅವಳೊಬ್ಬಳಿಗೆ ಯಾಕಪ್ಪಾ' 'ಥೋ ಥೋ ಬಿಡ್ರಲೇ ಅದೇನು ಅವರು ಮಾಡಬಾರದ್ದನ್ನ ಮಾಡಿದಾರೆ ಅನ್ನಂಗೆ ತುಡ್ರಿಕಂಡಿದಿರೋ' ಅಂತ ಆಗ ತಾನೇ ಎಂಟ್ರಿ ಕೊಟ್ಟು ಈ ವಿದ್ಯಮಾನ ನೋಡ್ತಾ ನಿಂತಿದ್ದ ಪಟಾಲಮ್ಮಿನ ಮತ್ತೊಬ್ಬ ಸದಸ್ಯ ಗಂಟೆ ಮನೆ ಶಿವಕುಮಾರನ ಮಾತು ಕೇಳಿ ಎಲ್ಲರೂ ಅವನ ಕಡೆ ಕಣ್ಣಾಕಿದರು. 'ಲೋ ಶಿವಕುಮಾರ ನಿನಗೆ ಗೊತ್ತಿಲ್ಲಕಣೋ ಅಡಕೆ ಸುಲಿಬೇಕಾರೆ ಈ ಜಯಂತನ ಚೇಷ್ಟೆ ಏನು, ಅಂಗಡಿಗೆ ಬಂದಾಗ ಈ ಶೇಕ್ರಿಯ ನಯ ನಾಜೂಕಿನ ಮಾತೇನು....' ಅಂದ ಪರಮೇಶಿಯ ಮಾತನ್ನು ತಡೆಯುತ್ತಾ 'ಇಲ್ಲಿ ನೋಡೋ ನಾನೂ ಜಯಂತ ಇಬ್ರೂ ಆಕೇನ ಮಾತಾಡ್ಸಿದ್ದು ನಿಜ, ಅಷ್ಟಕ್ಕೇ ಇವನು ಕತೆ ಕಟ್ಟ ಬೇಕಾ' ಅಂದ ಶೇಕ್ರಿಯ ಮಾತಿಗೆ ಪರಮೇಶಿ ' ನಾನೇನು ಕತೆ ಕಟ್ಟಿಲ್ಲಪ್ಪ, ನೀನು ಮೊನ್ನೆ ಅವಳು ಅರ್ಧ ಕೆಜಿ ಅಂದ್ರೆ ಒಂದು ಕೆಜಿ ಯಾಕೆ ಕೊಟ್ಟೆ, ಬೇರೆಯವ್ರಿಗೂ ಹಂಗೇ ಕೊಡ್ತೀಯಾ' ಶಿವಕುಮಾರ 'ಬಿಡ್ರೋ ಏನೋ ಕೊಟ್ಟಿರಬೇಕು, ಅದುನ್ನೇ ದೊಡ್ಡದು ಮಾಡಿ ಪಾಪ ಆ ಹುಡುಗೀನ ಹರಾಜು ಮಾಡಬ್ಯಾಡ್ರಿ, ದೇಶದಾಗೆ ಇನ್ನೂ ಏನೇನು ನಡೆದೈತೋ ಅದನ್ನ ನೋಡಾನ, ಬಿಡ್ರೋ ಆ ಮಾತು' ಅಂತ ಆ ಅಧ್ಯಾಯವನ್ನು ಕೊನೆಗೊಳಿಸಿ ಈ ಮುಖ್ಯ ಮಂತ್ರಿ, ಮಂತ್ರಿ ಅಂತ ರಾಜಕೀಯದ ವರಸೆ ತೆಗೆಯಲು ಪ್ರೇಮ ಕತೆಯಷ್ಟೇ ಕುತೂಹಲದಿಂದ ಎಲ್ಲರೂ ಕೇಳಲು ತೊಡಗಿದರು.



ಮೀನಾಕ್ಷಿಗೆ ಇದ್ಯಾವುದೂ ಗೊತ್ತಾಗುತ್ತಿರಲಿಲ್ಲ. ಅವಳ ಲೋಕ ಅವಳ ಮನೆ ಅಪ್ಪ, ಅವ್ವ, ತಮ್ಮ ಇಷ್ಟೆ. ಆದರೆ ಹದಿ ಹರೆಯದ ಸೆಳೆತಗಳೂ ಇದ್ದವು. ಜಯಂತ, ಶೇಕ್ರಿ ಇಬ್ಬರೂ ಅವಳಿಗೆ ಮಾಡುವ ಉಪಕಾರಕ್ಕೆ ಆಕೆ ವಿಶೇಷ ಅರ್ಥವನ್ನೇನೂ ಕೊಟ್ಟವಳಲ್ಲ. ಆದರೆ ಎಲ್ಲೋ ಒಂದು ಮೂಲೆಯಲ್ಲಿ ಶೇಕ್ರಿಯ ಸೆಳೆತ ಇದ್ದಂಗಿತ್ತು. ಆದರೆ ಅವರಿಬ್ಬರ ಜಾತಿಯೂ ತನ್ನದೂ ಬೇರೆ ಬೇರೆ, ಅಂಥದರಲ್ಲಿ ಸಂಬಂಧಕ್ಕಾಗಿ ಬರೋದಂತೂ ದೂರದ ಮಾತು, ಮನದಲ್ಲಿ ಕೆಟ್ಟದೊಂದು ಆಲೋಚನೆ ಹಣಿಕಿ ಮಾಯವಾಯಿತು. ಮೀನಾಕ್ಷಿ ನಡುಗಿ ಹೋದಳು. ಅಲ್ಲಿಗೆ ಅವರಿಬ್ಬರ ಬಗೆಗೂ ಯೋಚಿಸುವುದನ್ನು ಬಿಟ್ಟಳು.

ಶೇಕ್ರಿಯ ಮನದಲ್ಲಿದ್ದ ಆಸೆಗೆ ಒಂದು ಅರ್ಥ ಇದ್ದಂತಿತ್ತು. ಅವನು ಸಾಹಿತ್ಯ ಓದಿದವನಾದ್ದರಿಂದ ಪ್ರಗತಿಪರವಾದ ಮನಸ್ಸೂ ಅವನಲ್ಲಿತ್ತು. ಜಾತಿವಿನಾಶವಾಗಬೇಕು ಎಂಬ ವಿವೇಕವೂ ಇತ್ತು. ಆದರೆ ಅಂತಹ ಬಸವಣ್ಣನ ಕೈಲೇ ಆಗದ್ದು ತನ್ನಿಂದ ಸಾಧ್ಯವೇ ಎಂಬ ಅಳುಕೂ ಇತ್ತು. ಬಸಜ್ಜನ ಮೂಲಕ ಕೇಳಿಸಲೇ ಎಂದುಕೊಂಡ, ಯಾಕೋ ತನ್ನ ಜಾತಿಯ ಬಸಜ್ಜ ಇದಕ್ಕೆ ಒಪ್ಪಲಾರ ಎಂದು ಸ್ವಯಂ ತೀರ್ಮಾನಕ್ಕೆ ಬಂದ. ಜಯಂತನೂ ಅವಳನ್ನು ಇಷ್ಟಪಡುತ್ತಿರುವುದು ಅವನಿಗೆ ತಿಳಿದೇ ಇತ್ತು. ಆದರೆ ಅವನ ಇಷ್ಟದ ಸ್ವರೂಪ ಏನು ಎಂತು ಎಂಬುದೂ ತಿಳಿದಿತ್ತು. ಮೊದಲೇ ಗೌಡಾಳಿಕೆ ಮನೆತನ. ಅವರಪ್ಪ ಗೌಡ್ರ ಗಂಗಾಧರಪ್ಪ ಹುಲಿಯಂಥವರು. ಜಾತಿಯ ಕಟ್ಟಾ ಭಕ್ತರು. ತನ್ನ ಜಾತಿ ಗೌಡರ ಜಾತಿ ಒಂದೇ ಆಗಿದ್ದರೂ ಹಂಗೆ ದರ್ಪ, ದುಡ್ಡು, ಅಧಿಕಾರ ನಮ್ಮೊಳಗೇ ಮೇಲು ಕೀಳು ಉಂಟುಮಾಡುತ್ತದೆ ಎಂದು ಒಳಗೇ ನೊಂದುಕೊಳ್ಳುತ್ತಿದ್ದ. ತನ್ನ ವಾರಗೆಯವರ ಜೊತೆ ಮಾಡುತ್ತಿದ್ದ ಕೀಟಲೆಯಾಟವೇ ಬೇರೆ, ಅವನೊಳಗಿನ ಈ ಗಂಭೀರ ವಿಚಾರವೇ ಬೇರೆ. ಜಾತಿಯನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆ ತನ್ನ ತಂದೆ ಭದ್ರಪ್ಪನನ್ನೂ ಮೀರಿ ಹೋಗಬಲ್ಲ ಛಾತಿಯೂ ಅವನಲ್ಲಿತ್ತು, ಆದರೆ ಇದ್ಯಾವುದೂ ಸದ್ಯದ ಸ್ಥಿತಿಯಲ್ಲಿ ಆಗು ಹೋಗುವುದಲ್ಲ ಎಂಬ ಅರಿವೂ ಅವನಲ್ಲಿತ್ತು.

ಜಯಂತನಿಗೆ ಈ ಅವಕಾಶ ಇರಲೇ ಇಲ್ಲ. ಅವನು ಅವರಪ್ಪನ ಆಣತಿಯನ್ನು ಮೀರುವಂತವನಲ್ಲ. ಗೌಡಾಳಿಕೆಯ ಗತ್ತೂ ಅವನಿಗೆ ವಂಶ ಪಾರಂಪರ್ಯವಾಗಿ ಬಂದದ್ದೇ, ಆಗಿನ